



ಬಣ್ಣ ಮತ್ತು ಬಹುತ್ವಕ್ಕೆ ಉತ್ತಮ ಉದಾಹರಣೆ 'ಕಾಮನಬಿಲ್ಲು'. ಏಳು ಬಣ್ಣಗಳು ಒಂದಕ್ಕೊಂದು ಹೆಣೆದುಕೊಂಡು ರೂಪುಗೊಳ್ಳುವ ಈ ಮಳೆಬಿಲ್ಲು ಮೋಹಕವಷ್ಟೇ ಅಲ್ಲ, ವೈವಿಧ್ಯದಲ್ಲಿ ಏಕತೆ ಹಂಬಲಿಸುವವರಿಗೆ ರೂಪಕವೂ ಹೌದು. ಗಮನಿಸಿ ನೋಡಿ, ಏಳು ಬಣ್ಣಗಳು ಬಿಡಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲದಂತೆ ತಬ್ಬಿಕೊಂಡು ಬಿಲ್ಲಿನ ಆಕೃತಿ ತಾಳಿವೆ. ಹೀಗೆ ಒಟ್ಟಿಗಿದ್ದಾಗಲೂ ಪ್ರತಿ ಬಣ್ಣವೂ ತನ್ನ ಅಸ್ತಿತ್ವ ಉಳಿಸಿಕೊಂಡಿದೆ. ಹೀಗೆ ತನ್ನತನ ಉಳಿಸಿಕೊಂಡೂ ಬಹುತ್ವದೊಂದಿಗೆ ಒಂದಾಗುವುದು ಭಾರತೀಯ ಸಮಾಜದ, ಭಾರತೀಯ ಸಂಸ್ಕೃತಿಯ ಪ್ರಧಾನ ಚಹರೆಯೂ ಹೌದು. ಭಾರತ ಮಾತ್ರವೇನು, ಇಡೀ ವಿಶ್ವಕ್ಕೆ ಅಗತ್ಯವಾದುದು ಈ 'ಬಹುತ್ವ'.

ಆದರೆ, ಇಂದಿನ ವಿಶ್ವ ನೋಡಿ. ಕಪ್ಪು ಮತ್ತು ಬಿಳಿ ಎನ್ನುವ ಸುಂದರವಾದ ಬಣ್ಣಗಳು ಮನುಷ್ಯರನ್ನು ಪ್ರತ್ಯೇಕಿಸುವ ಛಾಯೆಗಳೂ ಆಗಿವೆ. ವರ್ಣಭೇದದ ಆಚರಣೆ ಮನುಕುಲದ ಇತಿಹಾಸದಲ್ಲಿನ ಕಳಂಕಿತ ಪುಟಗಳು. ವ್ಯಕ್ತಿಯೊಬ್ಬನಿಗೆ ಅವನ ಬಣ್ಣ ಮುಜುಗರ–ಕೀಳರಿಮೆ ಉಂಟುಮಾಡುವಂತಾದರೆ, ಸಮಾಜದ ಆರೋಗ್ಯ ಸರಿಯಾಗಿಲ್ಲ ಎಂದೇ ಅರ್ಥ.

'ಜೀವನ ಎನ್ನುವುದು ಬಣ್ಣದ ಕಡ್ಡಿಗಳ ಪೆಟ್ಟಿಗೆ' ಎನ್ನುವುದೊಂದು ಮಾತಿದೆ. 'ಬಣ್ಣ ಎನ್ನುವುದು ಆತ್ಮವನ್ನು ನೇರವಾಗಿ ಪ್ರಭಾವಿಸುವ ಶಕ್ತಿಯನ್ನು ಹೊಂದಿದೆ' ಎನ್ನುವ ಮಾತೂ ಇದೆ. 'ನಾನು ಬಣ್ಣಗಳಲ್ಲಿ ಜೀವಿಸಲು ಬಯಸುತ್ತೇನೆ' ಎಂದು ಚಿತ್ರಕಾರನೊಬ್ಬ ಉದ್ಗರಿಸಿದ್ದಾನೆ. ಈ ಎಲ್ಲ ಮಾತುಗಳ ಇಂಗಿತ ಇಷ್ಟೇ: ನಮ್ಮ ಬದುಕು ಹಾಗೂ ಆ ಬದುಕನ್ನೊಳಗೊಂಡ ಜಗತ್ತು ಬಣ್ಣಗಳೊಂದಿಗೆ ತಳಕು ಹಾಕಿಕೊಂಡಿದೆ.

ಈ ಬರಹದೊಂದಿಗಿನ ಚಿತ್ರಗಳನ್ನು ನೋಡಿ. ಬ್ರೆಜಿಲಿಯನ್ ನೃತ್ಯಗಾತಿಯ ಮೈಮನಗಳ ತುಂಬ 'ಸಾಂಬಾ' ನೃತ್ಯದ ಸಂಭ್ರಮ ಆವಾಹನೆಯಾದಂತೆ ಕಾಣಿಸುತ್ತಿದೆ. ಹಲವು ಬಣ್ಣಗಳ ಕೊಲಾಜ್‌ನಂತೆ ಆ ನೃತ್ಯಾಂಗನೆ ಕಾಣಿಸುತ್ತಿದ್ದಾಳೆ. ಹಿನ್ನೆಲೆಯಲ್ಲಿನ ಜನಜಂಗುಳಿಯ ಬಣ್ಣಗಳು, ಮುಗಿಲ ಬಯಲಿನ ಅನಂತ ನೀಲಿ – ಇವೆಲ್ಲವೂ ವರ್ಣವಿಲಾಸದ ಮಾದರಿಗಳಂತೆ ಕಾಣಿಸುತ್ತಿವೆ.

ನೃತ್ಯದ ಉತ್ಸಾಹ–ಉನ್ಮಾದದ ವಿರೋಧಾಭಾಸದಂತೆ ನೇಪಾಳಿ ಸಾಧುವಿನ ಚಿತ್ರಪಟವಿದೆ. ಕೈಯಲ್ಲಿನ ಚೂರುಗನ್ನಡಿಯಲ್ಲಿ ನೋಡಿಕೊಳ್ಳುತ್ತ ಹಣೆಯನ್ನು ಶೃಂಗರಿಸಿಕೊಳ್ಳುತ್ತಿರುವ ಈ ಸಾಧು ವರ್ಣಮೋಹಿಯೇ ಇರಬೇಕು. ಬಣ್ಣಗಳ ಗುಂಗಿಗೆ ಒಳಗಾದಂತೆ ಕಾಣಿಸುವ ಆತನ ಮುಖದ ತುಂಬ ಅದೆಷ್ಟು ರಂಗು!

ಸಾಧುವಿನ ಚಿತ್ರದ ಜೊತೆಗೆ ಮುಖವನ್ನು ಬಣ್ಣಗಳಿಗೆ ಒಪ್ಪಿಸಿಕೊಂಡ ತರುಣಿಯನ್ನೂ ವಿಚಿತ್ರ ಮುಖಭಾವದ ಇಬ್ಬರು ತರುಣರನ್ನೂ ಗಮನಿಸಬೇಕು. ಪೋರ್ಚ್‌ಗಲ್‌ನ ಈ ತರುಣಿ, ಹಾಸ್ಯಮೇಳವೊಂದನ್ನು ಆನಂದಿಸುತ್ತ, ಆ ಸಂತಸವನ್ನೆಲ್ಲ ತನ್ನ ಮುಖದ ಬಣ್ಣಗಳಲ್ಲಿ ತುಳುಕಿಸುವ ಉಮೇದಿನಲ್ಲಿರುಂತಿದೆ. ಇನ್ನು ಆ ಇಬ್ಬರು ತರುಣರು ಕೊಲಂಬಿಯಾದವರು. ಫ್ಯಾಂಟಸಿ ಪರೇಡ್‌ನಲ್ಲಿ ಭಾಗವಹಿಸಿ, ತಮ್ಮ ಮುಖಗಳನ್ನೇ ಅದ್ಭುತ–ರಮ್ಯ ಭಾವಗಳ ಸಂಚಾರಕ್ಕೆ ಕನ್ನಡಿಯಾಗಿಸಿಕೊಂಡಿದ್ದಾರೆ. ಅವರ ಮುಖದ ಕಪ್ಪು, ತುಟಿಗಳ ಕೆಂಪು, ನಾಲಗೆ, ಕಣ್ಣುಗಳ ಹೊಳಪು, ಟೊಪ್ಪಿಯಲ್ಲಿನ ನೀಲಿ ಹಾಗೂ ಕೆಂಪು – ಇವೆಲ್ಲ ಬಣ್ಣಗಳು ಫ್ಯಾಂಟಸಿಯನ್ನು ಕಳೆಗಟ್ಟಿಸುವಂತಿವೆ.

ವಿಶ್ವದ ವಿವಿಧ ಮೂಲೆಗಳಲ್ಲಿನ ಈ ಮುಖಗಳನ್ನು ಒಟ್ಟಿಗಿಟ್ಟು ನೋಡುವ ಉದ್ದೇಶ ಇಷ್ಟೇ. ಈ ವಿಶ್ವವೇ ಒಂದು ಕಾಮನಬಿಲ್ಲು ಎಂದು ಭಾವಿಸಿ. ಹಲವು ಬಣ್ಣಗಳನ್ನು ಪ್ರತಿನಿಧಿಸುವ ಭೂಗೋಲದ ಬೇರೆ ಬೇರೆ ಭಾಗಗಳ ಈ ಜನರೆಲ್ಲ ಒಂದು ಬಿಂದುವಿನಲ್ಲಿ ಸೇರಿಕೊಂಡು ವಿಶ್ವವೆನ್ನುವ ಕಾಮನಬಿಲ್ಲನ್ನು ಸೃಜಿಸಿದ್ದಾರೆ. ಯಾವುದೊಂದು ಬಣ್ಣವೋ ವ್ಯಕ್ತಿಯೋ ರೇಖೆಯಿಂದ ಹೊರಬಂದಲ್ಲಿ ಬಿಲ್ಲು ಬಿರುಕಾಗುತ್ತದೆ, ಬಣ್ಣ ಕಳೆಗುಂದುತ್ತದೆ.

ಹೋಲಿ ಹಬ್ಬದ ಸಂಭ್ರಮದ (ಮಾರ್ಚ್ 20–21) ಸಂದರ್ಭವಿದು. ಹೋಲಿ ಬಣ್ಣಗಳನ್ನು ಸಂಭ್ರಮಿಸುವ ಹಬ್ಬ. ಮನಸ್ಸಿನೊಳಗಿನ ಕಲ್ಮಶಗಳನ್ನು ಕಳಕೊಂಡು ಬಹುತ್ವದ ಮಾದರಿಗೆ ನಮ್ಮನ್ನು ಒಪ್ಪಿಸಿಕೊಳ್ಳಲು ಹೋಲಿಗೂ ಮಿಗಿಲಾದ ಸಂದರ್ಭ ಇನ್ನೊಂದುಂಟೆ?